# ಹೊಸತನದ ತುಡಿತ ಕಥಕ್ ಅನವರತ




**ಕಥಕ್ ನೃತ್ಯಗಾರ್ತಿ ಮಾನಸ ಜೋಶಿ ಕೊರಿಯೊಗ್ರಫಿಯಲ್ಲಿ ಹೆಚ್ಚು ತೊಡಗಿಕೊಂಡಿದ್ದು, ಕೊರೊನಾ ಕಾಲದಲ್ಲೂ ಕಥಕ್ ಬಗ್ಗೆ ಅಧ್ಯಯನ, ಪ್ರಯೋಗ ನಡೆಸುತ್ತಿದ್ದಾರೆ. ನಟನೆ, ಕೊರಿಯೊಗ್ರಫಿ ಎರಡನ್ನೂ ಬ್ಯಾಲೆನ್ಸ್ ಮಾಡುತ್ತಾ ನೃತ್ಯದಲ್ಲಿ ಹೊಸ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಅವರು ಕಥಕ್ ಕೊರಿಯೊಗ್ರಫಿ ಜೊತೆಗೆ ತಮ್ಮ ಮುಂದಿನ ಯೋಜನೆಯನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.**

■ **ಉಮಾ ಅನಂತ್**

◆ **ಮೈಸೂರು ಸಂಸ್ಥಾನದ ರಾಜ್ಯಗೀತೆಯಾಗಿದ್ದ ರಚನೆಗೆ ಕಥಕ್ ಕೊರಿಯೊಗ್ರಫಿ ಮಾಡುತ್ತಿದ್ದೀರಿ. ಇದು ಯಾವ ಹಂತ ತಲುಪಿದೆ?**

ಮೈಸೂರು ಸಂಸ್ಥಾನದ ರಾಜ್ಯ ಗೀತೆಯಾಗಿದ್ದ 'ಕಾಯೊ ಶ್ರೀ ಗೌರಿ ಕರುಣಾಲಹರಿ' ಗೀತೆಗೆ ಹಿಂದೂಸ್ತಾನಿ ಶಾಸ್ತ್ರೀಯ ಶೈಲಿಯಲ್ಲಿ ಸಂಗೀತ ನಿರ್ದೇಶಕ ಪ್ರವೀಣ್ ರಾವ್ ಅವರು ಸಂಗೀತ ಸಂಯೋಜಿಸಿದ್ದು, ಇದಕ್ಕೆ ನಾನು ಕಥಕ್ ಶೈಲಿಯ ನೃತ್ಯವನ್ನು ಕೊರಿಯೊಗ್ರಫಿ ಮಾಡಿದ್ದು, ಮುಕ್ತಾಯದ ಹಂತದಲ್ಲಿದೆ. ಆಸ್ಥಾನ ಕವಿಯಾಗಿದ್ದ ಬಸವಪ್ಪ ಶಾಸ್ತ್ರಿ ಅವರು 1881ರಲ್ಲಿ ಈ ಹಾಡು ರಚಿಸಿದ್ದು, ಇದನ್ನು ಮೈಸೂರು ಸಂಸ್ಥಾನದ ರಾಜ್ಯಗೀತೆಯಾಗಿಯೇ ಹಾಡಲಾಗುತ್ತಿತ್ತು. ಮೈಸೂರಿನ ಪರಂಪರೆಯನ್ನು ನೃತ್ಯದ ಮೂಲಕವೂ ಜನ ನೋಡಿ ಆಸ್ವಾದಿಸಲಿ ಎಂಬ ಉದ್ದೇಶದಿಂದ ಈ ಹಾಡನ್ನು ಕಥಕ್ ನೃತ್ಯಕ್ಕೆ ಅಳವಡಿಸಿದ್ದೇನೆ. ಇದು ನನ್ನ ಇತ್ತೀಚಿನ ಯೋಜನೆ.

ಕಥಕ್ ನೃತ್ಯಕ್ಕೆ ಸೂಕ್ತವೆನಿಸುವ ಪ್ರಾಚೀನ ಬಂದೀಶ್‌ಗಳನ್ನು ನೃತ್ಯಕ್ಕೆ ಅಳವಡಿಸಿ ಕೊರಿಯೊಗ್ರಫಿ ಮಾಡುವ ನಿಟ್ಟಿನಲ್ಲಿ ಚಿಂತನೆ ನಡೆಸಿದ್ದೇನೆ. ಇದರ ಜೊತೆಗೆ ಕನ್ನಡ ಗೀತೆಗಳು, ಬಸವಣ್ಣನವರ ವಚನ, ಸಂತ ಶಿಶುನಾಳ ಶರೀಫರ ರಚನೆಗಳು, ಪುರಂದರ ದಾಸರ ಪದಗಳನ್ನು ಕಥಕ್‌ನಲ್ಲಿ ಅಭಿನಯಿಸುವ ಬಗ್ಗೆಯೂ ಕೆಲಸ ಮಾಡಬೇಕೆಂದಿದ್ದೇನೆ.

◆ **ಸಿನಿಮಾ ನಟನೆ ಜೊತೆಗೆ ಕಥಕ್ – ಎರಡರ ನಿರ್ವಹಣೆ ಹೇಗೆ?**

ನಟನೆ ಮತ್ತು ನೃತ್ಯ ಎರಡೂ ನನಗೆ ಅತ್ಯಂತ ಪ್ರಿಯವಾದ ಕಲಾ ಪ್ರಕಾರಗಳೇ. ಕಥಕ್ ನೃತ್ಯವನ್ನು ಆಸಕ್ತರಿಗೆ ಕಲಿಸುವ ಸಲುವಾಗಿ ಮೂರು ವರ್ಷ ಹಿಂದೆ 'ಜೋಶಿ ಕಥಕ್ ಅಕಾಡೆಮಿ' ಎಂಬ ನೃತ್ಯಶಾಲೆ ಬೆಂಗಳೂರಿನಲ್ಲಿ ಆರಂಭಿಸಿದೆ. ಸಿನಿಮಾ ಶೂಟಿಂಗ್ ಇದ್ದ ದಿನ ಕಥಕ್ ರಿಯಾಜ್ ಅನ್ನು ಬೆಳಿಗ್ಗೆ ಬೇಗ ಎದ್ದು ಮುಗಿಸಿಕೊಳ್ಳುವೆ. ಶೂಟಿಂಗ್ ಮುಗಿಸಿ ಬಂದು ನೃತ್ಯ ತರಗತಿ ತೆಗೆದುಕೊಳ್ಳುವೆ. ಸಿನಿಮಾ ಜಗತ್ತಿನಲ್ಲೂ ನಾನೊಬ್ಬ ಕಥಕ್ ಡಾನ್ಸರ್ ಎಂದು ಗೊತ್ತಿರುವ ಕಾರಣ ಎಲ್ಲರೂ ಬಹಳ ಸಹಕಾರ ಕೊಡುತ್ತಿದ್ದಾರೆ. ಇದರಿಂದಾಗಿ ಎರಡರನ್ನೂ ನಿಭಾಯಿಸಲು ಸಾಧ್ಯವಾಗಿದೆ.

◆ **ಬಿರ್ಜು ಮಹಾರಾಜ್ ಕಥಕ್‌ನ ಮೇರುಶಿಖರ. ಅವರ ಶೈಲಿ ಏನಾದರೂ ನಿಮ್ಮ ನೃತ್ಯದಲ್ಲಿ ಅನುಸರಿಸಿದ್ದೀರಾ?**

ಕಥಕ್‌ನಲ್ಲಿ ಮೂರು ಘರಾಣೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ಲಖನೌ, ಜೈಪುರ ಹಾಗೂ ಬನಾರಸ್. ನಾನು ಲಖನೌ ಘರಾಣೆಯಲ್ಲಿ ನೃತ್ಯ ಮಾಡುವುದು. ಪಂ. ಬಿರ್ಜು ಮಹಾರಾಜ್ ಅವರು ನಡೆಸಿಕೊಟ್ಟ ಮೂರು ವರ್ಕ್‌ಶಾಪ್‌ಗಳಲ್ಲಿ ಭಾಗವಹಿಸಿದ್ದೆ. ನಾನು ಬಿರ್ಜು ಮಹಾರಾಜ್ ಅವರಿಂದ ಬಹಳಷ್ಟು ಪ್ರಭಾವಿತಳಾಗಿದ್ದು, ನೃತ್ಯ ಕೊರಿಯೊಗ್ರಫಿ ಮಾಡುವಾಗ ಇವೆಲ್ಲ ಬಹಳ ಸಹಾಯಕ್ಕೆ ಬರುತ್ತಿದೆ. ಸದ್ಯ ನಾನು ಪಂ. ಬಿರ್ಜು ಮಹಾರಾಜ್ ಅವರ ಹಿರಿಯ ಶಿಷ್ಯೆಯಾದ ದುರ್ಗಾ ಆರ್ಯ ಅವರ ಬಳಿ ಕಥಕ್ ಅಭ್ಯಾಸ ಮಾಡುತ್ತಿದ್ದು, ಅಭಿನಯ–ಶೈಲಿ ಎರಡರಲ್ಲೂ ಮಹಾರಾಜ್ ಅವರ ಶೈಲಿಯೇ ಎದ್ದುಕಾಣುತ್ತಿದೆ.

◆ **ಕಥಕ್‌ನಲ್ಲಿ ಯಾವ್ಯಾವ ಕಥೆಗಳನ್ನು ಹೇಳಿದ್ದೀರಿ?**

ಕಥಕ್ ನನ್ನ ಭಾವನೆಗಳ ಅಭಿವ್ಯಕ್ತಿಯ ಸಾಧನ. ಇದರಲ್ಲಿ ಚಲನೆ ಹಾಗೂ ಅಭಿನಯದಲ್ಲಿರುವ ಸ್ವಾತಂತ್ರ್ಯ ಗುಣ ನನಗೆ ಇನ್ನೂ ಹೆಚ್ಚು ಕಲಿಯುವಂತೆ ಪ್ರೇರೇಪಿಸುತ್ತಿದೆ. ಕಥಕ್ ನೃತ್ಯ